**SEPTEMBER 23, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ, ಹಿಂಗಾರಿ ಬೆಳೆಗಳಿಗೂ ನೀರು ಪೂರೈಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ.**
- **ಮಾರುಕಟ್ಟೆ ಬೇಡಿಕೆ ಹಾಗೂ ಲಾಭ ಆಧರಿಸಿ, ಬೆಳೆ ಯೋಜನೆಗೆ, ಕೃಷಿ ವಿಶ್ವವಿದ್ಯಾಲಯ ಒತ್ತು ನೀಡಲಿ – ಸಚಿವ ಸಂತೋಷ ಲಾಡ್.**
- **ಬೆಳಗಾವಿ ವಿಭಾಗ ಮಟ್ಟದ, ಚಿತ್ರಕಲಾ ಶಿಕ್ಷಕರ, ಚಿತ್ರಕಲಾ ಕಮ್ಮಟಕ್ಕೆ, ಇಂದು ಧಾರವಾಡದಲ್ಲಿ ಚಾಲನೆ.**
- **'ತಂಬಾಕು ಮುಕ್ತ ಯುವ ಅಭಿಯಾನ'; ಕೊಟ್ಪಾ ಆಂದೋಲನ, ನಾಳೆಯಿಂದ ರಾಜ್ಯಾದ್ಯಂತ ಆರಂಭ.**

<><><>

**ಈಗ ವಾರ್ತೆಗಳ ವಿವರ**

<><><>

**ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ, ಹಿಂಗಾರಿ ಬೆಳೆಗಳಿಗೂ ನೀರು ಒದಗಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಕೊಪ್ಪಳ ತಾಲೂಕಿನ ಗಿಣಗೇರಾ ವಾಯು ನೆಲೆಯಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ತುಂಗಭದ್ರಾ ಜಲಾಶಯ ಮೈದುಂಬಿದ್ದು, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ, ಎರಡನೇ ಬೆಳೆಗೂ ನೀರು ಪೂರೈಕೆ ಸಾಧ್ಯ ಎಂದು, ಸ್ಪ ್ಟ ಪಡಿಸಿದರು.**

<><><>

**ತುಂಗಭದ್ರಾ ಜಲಾಶಯದಲ್ಲಿ ಬಾಗಿನ ಅರ್ಪಿಸಿ ಮಾತನಾಡಿದ ಮುಖ್ಯಮಂತ್ರಿ, ಪ್ರಾದೇಶಿಕ ಅಸಮಾನತೆ ನಿವಾರಣೆ ಅಧ್ಯಯನಕ್ಕೆ, ಗೋವಿಂದರಾವ್ ಸಮಿತಿ ರಚಿಸಲಾಗಿದೆ. ಸಮಿತಿ ವರದಿ ಆಧರಿಸಿ, ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ, ವಿಶೇಷ ನೀಲನಕ್ಷೆ ರೂಪಿಸುವುದಾಗಿ, ತಿಳಿಸಿದರು.**

<><><>

**ರಾಯಚೂರು ಜಿಲ್ಲೆಯ ಮಾನ್ವಿ, ಸಿರವಾರ ಹಾಗೂ ರಾಯಚೂರು ತಾಲೂಕಿನ ಕೊನೆಯ ಭಾಗಕ್ಕೆ ನೀರು ತಲುಪಿಸಲು ಕ್ರಮ ಕೈಗೊಳ್ಳುವಂತೆ, ಮುಖ್ಯಮಂತ್ರಿ ಪ್ರಾದೇಶಿಕ ಆಯುಕ್ತರಿಗೆ, ಸೂಚಿಸಿದರು.**

<><><>

ಮಾರುಕಟ್ಟೆ ಬೇಡಿಕೆ ಹಾಗೂ ಲಾಭ ಆಧರಿಸಿ, ಬೆಳೆ ಯೋಜನೆ ಬಗ್ಗೆ ಕೃಷಿ ವಿಶ್ವವಿದ್ಯಾಲಯ ಅಧ್ಯಯನ ಕೈಗೊಂಡು, ಸಕಾಲಿಕವಾಗಿ ರೈತರೊಂದಿಗೆ ಮಾಹಿತಿ ಹಂಚಿಕೊಂಡು, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್ ಹೇಳಿದ್ದಾರೆ.

'ಹವಾಮಾನ ವೈಪರಿತ್ಯ ನಿರ್ವಹಣೆಗೆ ಕೃಷಿ ತಾಂತ್ರಿಕತೆಗಳು' ಧ್ಯೇಯದೊಂದಿಗೆ, ಧಾರವಾಡ ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ, ನಾಲ್ಕು ದಿನಗಳ ಕೃಷಿ ಮೇಳಕ್ಕೆ, ಎರಡನೇ ದಿನವಾದ ನಿನ್ನೆ ಚಾಲನೆ ನೀಡಿ, ಸಚಿವರು ಮಾತನಾಡಿದರು.

<><><>

ಸಚಿವ ಸಂತೋಷ ಲಾಡ್ ಧ್ವನಿ 48 ಸೆಕೆಂದುಗಳು

<><><>

ಕೃಷಿ ಮೇಳದಲ್ಲಿ ಎಲ್ಲರ ಗಮನ ಸೆಳೆದ, ಕೀಟ ಪ್ರಪಂಚದ ಪ್ರದರ್ಶಿನಿ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಶಶಿಕಾಂತ ಉಡಿಕೇರಿ.

<><><>

ಪ್ರೊ. ಶಶಿಕಾಂತ ಉಡಿಕೇರಿ ಧ್ವನಿ 35 ಸೆಕೆಂದುಗಳು

<><><>

ಸಾಧಕ ಕೃಷಿಕ ಮಹಿಳೆ, ಉತ್ತರಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕು, ಬಿಳಗಿಯ ಕೃಷಿ ಸಾಧಕಿ ಸುಲೋಚನಾ ಶಾಸ್ತ್ರಿಯವರನ್ನು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸನ್ಮಾನಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಸುಲೋಚನಾ ಶಾಸ್ತ್ರಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಸುಲೋಚನಾ ಶಾಸ್ತ್ರಿ ಧ್ವನಿ ಸೆಕೆಂದುಗಳು 35 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲೂಕಿನ, ಮರೇಗುದ್ದಿಯ ನಿರುಪಾಧೀಶ ಸ್ವಾಮೀಜಿ, ಶಿಕ್ಷಣ ತಜ್ಞೆ ಎಸ್.ಎನ್.ವೆಂಕಟಲಕ್ಷ್ಮೀ ನರಸಿಂಹರಾಜು ಹಾಗೂ ಹುಬ್ಬಳ್ಳಿಯ ಸ್ವರ್ಣಗ್ರೂಪ್ ಕಂಪನಿ ಮುಖ್ಯಸ್ಥ ವೆಂಕಟ ಸತ್ಯ ವರಪ್ರಸಾದ ಅವರಿಗೆ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೆಟ್ ಪ್ರಕಟಿಸಲಾಗಿದೆ. ಉಪ ಕುಲಪತಿ ಪ್ರೊಫೆಸರ್ ಕೆ.ಬಿ.ಗುಡಸಿ ಮಾಹಿತಿ ನೀಡಿ, ಕರ್ನಾಟಕ ವಿಶ್ವವಿದ್ಯಾಲಯದ, 74ನೇ ಘಟಿಕೋತ್ಸವ ನಾಳೆ ಬೆಳಗ್ಗೆ 11 ಗಂಟೆಗೆ, ಗಾಂಧಿ ಭವನದಲ್ಲಿ ಜರುಗಲಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಅಕಾದೆಮಿ ಅಧ್ಯಕ್ಷ ಪ್ರೊಫೆಸರ್ ಎಸ್.ಅಯ್ಯಪ್ಪನ್ ಘಟಿಕೋತ್ಸವ ಭಾಷಣ ಮಾಡಲಿದ್ದು, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಅಧ್ಯಕ್ಷತೆ ವಹಿಸುವರು ಎಂದರು.

<><><>

ಕಿತ್ತೂರು ಕರ್ನಾಟಕದ, ಬೆಳಗಾವಿ ವಿಭಾಗ ಮಟ್ಟದ, ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರ, 5 ದಿನಗಳ ಕಲಾಕೃತಿ ರಚನಾ ಕಮ್ಮಟ, ಇಂದಿನಿಂದ ಧಾರವಾಡದ ಸರ್ಕಾರಿ ಕಲಾ ಮಂದಿರದಲ್ಲಿ, ಆರಂಭಗೊಳ್ಳಲಿದೆ.

ಬೆಳಗ್ಗೆ 11 ಗಂಟೆಗೆ, ಕಮ್ಮಟಕ್ಕೆ ಗಣ್ಯರು ಚಾಲನೆ ನೀಡಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರಾದ, ಜಯಶ್ರೀ ಶಿಂತ್ರಿ ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಜಯಶ್ರೀ ಶಿಂತ್ರಿ ಧ್ವನಿ 25 ಸೆಕೆಂದುಗಳು

<><><>

ತಂಬಾಕು ಹಾಗೂ ಸಂಬಂಧಿತ ಉತ್ಪನ್ನಗಳ ಸೇವನೆಯಿಂದ, ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ, ಶ್ರೀ ಸಾಮಾನ್ಯರಲ್ಲಿ ಜಾಗ್ರತಿ ಮೂಡಿಸುವ ಕೊಟ್ಪಾ ಆಂದೋಲನ, ನಾಳೆಯಿಂದ ರಾಜ್ಯಾದ್ಯಂತ ಆರಂಭಗೊಳ್ಳಲಿದೆ. ಎರಡನೇಯ ಆವೃತ್ತಿಯ 'ತಂಬಾಕು ಮುಕ್ತ ಯುವ ಅಭಿಯಾನ' ಕ್ಕೆ ಚಾಲನೆ ಸಿಗಲಿದೆ. ಜನನಿಬಿಡ ಪ್ರದೇಶಗಳಾದ ಬಸ್ ಹಾಗೂ ರೈಲ್ವೆ ನಿಲ್ದಾಣ, ಆಸ್ಪತ್ರೆಗಳು, ಶಾಲಾ–ಕಾಲೇಜುಗಳು ಸೇರಿದಂತೆ, ಜಿಲ್ಲೆಯ ಮಹತ್ವದ ಸ್ಥಳಗಳಲ್ಲಿ, ಧೂಮ್ರಪಾನ, ಗುಟಖಾ ಹಾಗೂ ತಂಬಾಕು ಉತ್ಪನ್ನಗಳ ಸೇವನೆಯಿಂದ, ಉಂಟಾಗುತ್ತಿರುವ ಆರೋಗ್ಯ ಸಮಸ್ಯೆ ಹಾಗೂ ಅವುಗಳನ್ನು ಯುವಜನ ಸೇವಿಸದಂತೆ ಜಾಗ್ರತಿ ಮೂಡಿಸಲು ಯೋಜಿಸಲಾಗಿದೆ.

<><><>

ಹಾವೇರಿ ಜಿಲ್ಲೆಯ ಆಯ್ದ 60 ಶಾಲೆಗಳಲ್ಲಿ, 60 ದಿನಗಳ ಕಾಲ ನಿರಂತರ ಜಾಗ್ರತಿ ಜಾಥಾ ಆಯೋಜಿಸಿ, ಕೊಟ್ಪಾ ಕಾಯ್ದೆ ಬಗ್ಗೆ ತಿಳಿವಳಿಕೆ ಮೂಡಿಸಲು ಜಿಲ್ಲಾಡಳಿತ ಸಿದ್ಧಗೊಂಡಿದೆ. ತಂಬಾಕು ಮುಕ್ತ ಗ್ರಾಮ, ತಂಬಾಕು ಮುಕ್ತ ಸರ್ಕಾರಿ ಕಚೇರಿ ಹಾಗೂ ತಂಬಾಕು ಮುಕ್ತ ಶಾಲೆಗಳನ್ನು ರೂಪಿಸಲು ದ್ವೈಮಾಸಿಕ ಆಂದೋಲನದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

<><><>

ಮಂಗಳೂರಿನ ಸುರತ್ಕಲ್ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದ ಸಹಯೋಗದಲ್ಲಿ, ಸುರತ್ಕಲ್ ಕಡಲ ಕಿನಾರೆಯಲ್ಲಿ, ಸ್ವಚ್ಛತಾ ಕಾರ್ಯ ನಡೆಯಿತು. 300 ಕ್ಕೂ ಹೆಚ್ಚು ಜನ ಸ್ವಯಂಸೇವಕರು, ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು. ಕಡಲತೀರದ ಸ್ವಚ್ಛತೆ ಕಾಪಾಡುವ ಜೊತೆಗೆ, ಸಾರ್ವಜನಿಕರಲ್ಲಿ ಸ್ವಚ್ಛತೆಯೇ ಸೇವೆ ಆಂದೋಲನದ ಬಗ್ಗೆ, ಜನ ಜಾಗೃತಿ ನಡೆಯಿತು. ಸ್ವಚ್ಛತೆಯ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

<><><>

ಕವಿ, ದಿವಂಗತ ಡಾಕ್ಟರ್ ವ್ಹಿ.ಸಿ. ಐರಸಂಗ ಅವರ, 94ನೇ ಜನ್ಮ ದಿನದ ಹಿನ್ನೆಲೆ, ಧಾರವಾಡದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ, ಇಂದು ಸಂಜೆ 4.30ಕ್ಕೆ ಶ್ರೀಮತಿ ಚನ್ನವ್ವ ಚೆನ್ನಪ್ಪ ಐರಸಂಗ ದತ್ತಿ ಹಾಗೂ ಶ್ರೀ ರಾಮಚಂದ್ರ ಚಿಲಕವಾಡ ಸ್ಮರಣಾರ್ಥ ದತ್ತಿ, ಕವನ ವಾಚನ ಕಾರ್ಯಕ್ರಮ ಜರುಗಲಿದೆ. ಧಾರವಾಡ ಆಕಾಶವಾಣಿಯ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಶರಣಬಸವ ಚೋಳಿನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

<><><>

ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ವನ್ಯಜೀವಿ ಹಾಗೂ ಪ್ರಕೃತಿ ಸಂರಕ್ಷಣೆಗಾಗಿ ಯುವಜನರನ್ನು ಪ್ರೇರೇಪಿಸಲು, 'ಝೂ ಕ್ಲಬ್' ಸಂಘಟಿಸಲಾಗುತ್ತಿದೆ. 15 ವಾರಗಳ ಈ ಕಾರ್ಯಕ್ರಮ, ಅಕ್ಟೋಬರ್ 13 ರಿಂದ, ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ನಡೆಯಲಿದೆ. 10 ರಿಂದ 18 ವರ್ಷ ವಯಸ್ಸಿನ ಮಕ್ಕಳು ಭಾಗವಹಿಸಬಹುದು. ಅಕ್ಟೋಬರ್ 6ನೇ ತಾರೀಖಿನ ಒಳಗೆ, ಆಸಕ್ತರು, bannerughatta biopark.org ಜಾಲತಾಣದಲ್ಲಿ ಅರ್ಜಿ ಸಲ್ಲಿಸಿ, ಹೆಸರು ನೋಂದಾಯಿಸಬಹುದು. ಸರ್ಕಾರಿ ಶಾಲೆಯ ಮಕ್ಕಳಿಗೆ ಯಾವ್ಯದೇ ಶುಲ್ಕವಿಲ್ಲ.

<><><>

ಅರಣ್ಯ ಇಲಾಖೆ, ನೆಡುತೋಪುಗಳಲ್ಲಿ ಬೆಳೆಸಿರುವ ತೇಗದ ಮರಗಳ ಕಟಾವಿಗೆ, ನಿಗದಿತ ವಯೋಮಿತಿ ನಿಗದಿ ಪಡಿಸುವಂತೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಸಾಮಾಜಿಕ ಅರಣ್ಯೀಕರಣ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರಿಗೆ ಈ ಮಾಹಿತಿ ನೀಡಿದ ಅವರು, ಅರಣ್ಯ ಇಲಾಖೆ ಮರಮುಟ್ಟುಗಳಿಗಾಗಿ ನಿರ್ಧಿಷ್ಟ ಪ್ರದೇಶದಲ್ಲಿ ತೇಗದ ಮರಗಳನ್ನು ಬೆಳೆಸಿದೆ. ಮರಗಳ ಕಟಾವು 80 ವರ್ಷಕ್ಕೋ ಅಥವಾ 120 ವರ್ಷಕ್ಕೋ ಎಂಬ ಬಗ್ಗೆ ಜಿಜ್ಞಾಸೆ ಇದೆ.  ಈ ಹಿನ್ನೆಲೆ, ಉನ್ನತಾಧಿಕಾರಿ ನೇತೃತ್ವದ ಸಮಿತಿ ರಚಿಸಲಾಗಿದೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವಿಶ್ವ ಚೀಂಡಾ ಮೃಗ ದಿನದ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಚೀಂಡಾ ಮೃಗಗಳನ್ನು ರಕ್ಷಿಸುವ, ಭಾರತದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

<><><>

ನಾಡಹಬ್ಬ ಮೈಸೂರು ದಸರಾ ಅಂಗವಾಗಿ, ನಾಡ ಕುಸ್ತಿ ಪಂದ್ಯಾವಳಿಗೆ ಪೈಲ್ವಾನರ ಜೋಡಿ ಕಟ್ಟುವ ಕಾರ್ಯಕ್ರಮಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಚ್.ಸಿ.ಮಹದೇವಪ್ಪ ಮೈಸೂರಿನಲ್ಲಿ ಚಾಲನೆ ನೀಡಿದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಕಳೆದ 2 ವರ್ಷಗಳ ಅವಧಿಯಲ್ಲಿ, ಸಾವಿರದ 591 ಹಾವು ಕಡಿತದ ಪ್ರಕರಣಗಳು ವರದಿಯಾಗಿವೆ. ರೈತರು ಕೃಷಿ ಚಟುವಟಿಕೆಯನ್ನು ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಕೈಗೊಳ್ಳುವಂತೆ, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಮನವಿ ಮಾಡಿದ್ದಾರೆ. (69)

<><><>

ಈರುಳ್ಳಿ ಬೆಲೆ ನಿಯಂತ್ರಿಸಲು, ದೇಶದ 570 ಕಡೆಗಳಲ್ಲಿ ನಿಗಾ ವಹಿಸಲಾಗಿದೆ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಪ್ರಲ್ಹಾದ ಜೋಶಿ, ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

<><><>

ಮೈಸೂರಿನಲ್ಲಿ, ಅಕ್ಟೋಬರ್ 3 ರಿಂದ 12ರ ವರೆಗೆ, ದಸರಾ ಉತ್ಸವಗಳು ನಡೆಯಲಿವೆ. ಪ್ರವಾಸೋದ್ಯಮ ಇಲಾಖೆ, 'ಡಿಸ್ಕವರ್ ಮೈಸೂರು', ಸಾಮಾಜಿಕ ಮಾಧ್ಯಮ ಪ್ರಚಾರ ಅಭಿಯಾನ ಪ್ರಾರಂಭಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ, ಹಿಂಗಾರಿ ಬೆಳೆಗಳಿಗೂ ನೀರು ಪೂರೈಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ.

- ಮಾರುಕಟ್ಟೆ ಬೇಡಿಕೆ ಹಾಗೂ ಲಾಭ ಆಧರಿಸಿ, ಬೆಳೆ ಯೋಜನೆಗೆ, ಕೃಷಿ ವಿಶ್ವವಿದ್ಯಾಲಯ ಒತ್ತು ನೀಡಲಿ – ಸಚಿವ ಸಂತೋಷ ಲಾಡ್.
- ಬೆಳಗಾವಿ ವಿಭಾಗ ಮಟ್ಟದ, ಚಿತ್ರಕಲಾ ಶಿಕ್ಷಕರ, ಚಿತ್ರಕಲಾ ಕಮ್ಮಟಕ್ಕೆ, ಇಂದು ಧಾರವಾಡದಲ್ಲಿ ಚಾಲನೆ.
- 'ತಂಬಾಕು ಮುಕ್ತ ಯುವ ಅಭಿಯಾನ': ಕೊಟ್ಪಾ ಆಂದೋಲನ, ನಾಳೆಯಿಂದ ರಾಜ್ಯಾದ್ಯಂತ ಆರಂಭ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>